ದೋಣಿಗೆ ಹುಟ್ಟುಹಾಕಿ ತಳ್ಳುವಂತೆ ಮೀಟುತ್ತಾ ನಡೆದು ಅವಳ ಕಣ್ಣೆದುರು ದಾಟಿಕೊಳ್ಳುತ್ತಿದ್ದ. ಆಕೆ ಕೂತ ದಿಕ್ಕಿನ ಬಲಭಾಗಕ್ಕೆ ಬಿಳಿಮೈ ಬೋಳು ತಲೆ ಉದ್ದ ಮೂಗು ಕಡ್ಡಿಕೈಕಾಲುಗಳಲ್ಲಿ ಗೋಚರಿಸಿದ್ದೇ ಆಟೊಮ್ಯಾಟಿಕ್ ವಾಚಿನ ಸೆಕೆಂಡುಗಳಲ್ಲೇ ಓಡುವ ಬಟನನ್ನು ಒತ್ತಿಬಿಡುತ್ತಿದ್ದಳು. ಒಂದು... ಎರಡು... ಮೂರು...

ಅಮ್ಮನ ಕೂಗನ್ನು ಆ ಕ್ಷಣಗಳಲ್ಲಿ ಕಡೆಗಣಿಸಲೇಬೇಕಾಗುತ್ತಿತ್ತವಳಿಗೆ. ಇಪ್ಪತ್ತೆರಡು ಇಪ್ಪತ್ಮೂರು ಸೆಕೆಂಡುಗಳಲ್ಲಿ ಅಜ್ಜ ಕೊನೆಯ ಅಂಚಿನಲ್ಲಿ ಮಾಯವಾಗುತ್ತಿದ್ದ. ಅಸ್ತಂಗತವಾಗುತ್ತಿದ್ದ. ಥೆ ಥೆ ಹಾಗನ್ನಬಾರದು. ತನ್ನ ಗುರಿಯನ್ನು ತಲುಪಿದ. ಅಂದುಕೊಳ್ಳುತ್ತಿದ್ದಳು ಒಳಗೆ. ಎಲ್ಲವೂ ಸರಿಯಾದಂತೆ ಅನ್ನಿಸಿ, ಪಟ್ಟಿಪುಸ್ತಕ ಪೆನ್ಸಿಲು ಚಿಟ್ಟೆಯ ಮೇಲೆಯೇ ಬಿಟ್ಟು ಬಚ್ಚಲಿಗೆ ನಡೆದು ಬಿಡುತ್ತಿದ್ದಳು.

ಸೂರ್ಯ ಹುಟ್ಟುವುದು ಅಜ್ಜ ಬರುವುದು ಅಪ್ಪ ಸಂಜೆಗೆ ಬೇಗ ಮನೆ ಸೇರುವುದು ತಪ್ಪುತ್ತಿಲ್ಲ. ಎಲ್ಲ ನಿರಾಯಾಸ. ಎಂದು ಮೈಭಾರವನ್ನು ಕಳೆಯುವ ಮಲೆನಾಡಿನ ಹಂಡೆ ಒಲೆ ನೀರನ್ನು ನೆತ್ತಿ ಮೇಲಿಂದ ಸುರಿದುಕೊಳ್ಳುತ್ತಿದ್ದಳು. ಕೂದಲು ಹಸಿಯಾಗಿ ಬೆನ್ನಿಗೆ ಅಂಟಿಕೊಂಡಮೇಲೆ. 'ಅಯ್ಯೋ ಇವತ್ತೂ ತಲೆ ಮಿಂದ್ಯಾ' ಅಂತಾ ಅಲವತ್ತುಕೊಳ್ಳುವ ಅಮ್ಮನ ಮಾತು ನೆನಪಾಗುತ್ತಿತ್ತವಳಿಗೆ.

ವಾರಗಟ್ಟಲೆ ಮೀಯದ ಕೂಲಿಕಾರ ನೆಂಟರಿಷ್ಟರು ಬೇಕಾದಷ್ಟಿರುವಾಗ ನಿತ್ಯ ತನ್ನ ಮೀಯಿಸಿ, ಹಿತ್ತಿಲ ಮಣ್ಣಿನ ದಿಬ್ಬದ ಮೇಲೆ ಮೈಒಣಗಿಸಿಕೊಳ್ಳಲು ಕೂರಿಸಿ, ಅಲ್ಲಿಗೇ ನೀರ್ದೋಸೆ ತಂದು ತಿನ್ನಿಸುವ ಅಮ್ಮನ ಬೆಂಬಿಡದ ದಿನಚರಿಗೆ ಒಗ್ಗಿಕೊಂಡವಳು. ನಿತ್ಯ ಶಾಲೆಯಲ್ಲಿನ ಯಾವುದಾದರೂ ಗೆಳತಿಗೆ ಮಾತಿಗೆ ಸಿಕ್ಕಿಸಿಕೊಂಡು ಪ್ರಶ್ನಿಸುತ್ತಿದ್ದಳು. ಇವತ್ತೂ ಯಾಕೆ ತಡ ಎಂದದ್ದೇ ಗೆಳತಿಯರು ನಿತ್ಯ ಒಂದಿಲ್ಲೊಂದು ಕಾರಣ ಹೇಳುತ್ತಿದ್ದುದು. ತನಗೆ ಆ ತರಹದ ಸಮಸ್ಯೆಗಳು ಇಲ್ಲವೆಂದೇ ಅಂದುಕೊಳ್ಳುತ್ತಿದ್ದಳು. ನಮ್ಮನೆಗೆ ಗೆಸ್ಟ್ ಬಂದಿದ್ರು ಅಂತಲೋ, ಅಮ್ಮ ಎದ್ದಿದ್ದೇ ಲೇಟು ಅಂತಲೋ, ಅಪ್ಪ ಇರಲಿಲ್ಲ ಅಂತಲೋ. ಕಾರಣಗಳು ಪದೇ ಪದೇ ಮೇಷ್ಟ್ರ ಬಳಿ ಹೇಳುವ ಸ್ನೇಹಿತರು ಸುಳ್ಳೇ ಹೇಳುತ್ತಿದ್ದಾರೆಂದುಕೊಂಡಿದ್ದಳು. ವರ್ಷದ ಮುನ್ನೂರ ಅರವತ್ತೈದು ದಿನಗಳಲ್ಲಿ ಇನ್ನೂರ ಇಪ್ಪತ್ತು ದಿನ ಶಾಲೆ ನಡೆದರೆ, ಒಂದು ಹತ್ತು ದಿನ ಈ ತರಹದ ನೆಪಗಳು ಹೇಳಬಹುದು. ಐವತ್ತು ದಿನಗಟ್ಟಲೆ ಹೇಳಿದರೆ, ಅದೂ ವಾರಗಟ್ಟಲೆ ರಜೆ ಮೇಲೆ ಹೋದರೆ ಅವರ ವಿದ್ಯಾಭ್ಯಾಸದ ಗತಿಯೇನು ಎಂದು ಮೇಷ್ಟ್ರಂತೆ ತಾನೂ ಅವರಿವರ ಬಳಿ ಮಾತನಾಡುತ್ತಿದ್ದಳು. ಸಾಲಿಗೆ ಪಸ್ಸು ಬರ್ಬೇಕು ಅಂತಷ್ಟೇ ಮಂತ್ರದಂತೆ ಹೇಳಿ, ದೇವರ ಮೂಲೆಗೆ ನಿಂತು ಬಹಳ ಹೊತ್ತು ಕೈಮುಗಿದು, ಕಣ್ಣೀರೊರೆಸಿಕೊಳ್ಳುವ ನಿತ್ಯ ಕಾಯಕ ಮಾಡುವ ಅಮ್ಮ, ರಾತ್ರಿಯೆಲ್ಲಾ ಕಣ್ಣುಬಿಟ್ಟುಕೊಂಡೇ ಇರುವಂತೆ ಅನ್ನಿಸಿತ್ತವಳಿಗೆ. ಅಕಸ್ಮಾತ್ ಎಚ್ಚರವಾದ ಸಮಯದಲ್ಲಿ 'ಅಮ್ಮಾ...' ಎಂದಾಕ್ಷಣವೇ 'ಎಂತಾ' ಅನ್ನುವ ಉತ್ತರ ಸಿದ್ಧವಿರುತ್ತಿತ್ತು.

ಅಮ್ಮನ ಮೌನವೆಲ್ಲಾ ಪ್ರಾರಂಭವಾಗಿದ್ದು ಮೂರು ವರ್ಷದ ಹಿಂದಿನ ಜಾತ್ರೆಯ ಸಮಯ. ಬಾವಿಯಲ್ಲಿಂದ ಯಾರನ್ನೋ ಎತ್ತಿ ತೆಗೆಯುವ ದೃಶ್ಯವನ್ನು ಎಲ್ಲರೂ ಕಿಕ್ಕಿರಿದು ನೋಡುತ್ತಿದ್ದರು. ಅಮ್ಮ ಒಮ್ಮೆಲೆ ಚಿಟ್ಟನೆ ಚೀರಿ, ನನ್ನ ಕಣ್ಣುಮುಚ್ಚಿಕೊಂಡು ಅಲ್ಲಿಂದ ಹೊತ್ಕೊಯ್ದು ಮನೆ ಮುಟ್ಟುವವರೆಗೂ ಓಡಿದ್ದಳು. ಆಮೇಲೆ ಒಂದು ದಿನ ಲಕ್ಷ್ಮಿ ಸತ್ತಳು ಅಂತಾ ಶಾಲೆಯಲ್ಲಿ ಮಕ್ಕಳು ಮಾತನಾಡಿಕೊಳ್ಳುತ್ತಿದ್ದರು. ಸತ್ತಳು ಅಂದರೆ ಏನು ಅಂತಾ ಕೇಳಿದ್ದೆ. ಅಮ್ಮ ಊಟ ಬಿಟ್ಟಿದ್ದಳು. ಇನ್ನೊಂದು ದಿನ ಲಕ್ಷ್ಮಿಯನ್ನು ದೊಡ್ಡ ಬೈಕಿನ ಮೇಲೆ ಕೂರಿಸಿಕೊಂಡು, ಬರುತ್ತಿದ್ದ ಅವಳ ದೊಡ್ಡ ಮೀಸೆ ಮಾವ, ಲಕ್ಷ್ಮಿ ಗೆ ಕೊಟ್ಟಿದ್ದ ಕಥೆ ಪುಸ್ತಕವನ್ನು ಬೇಲಿಯೊಳಗೆ ಎಸೆದು ಹೋಗಿದ್ದ. ಆಮೇಲಾಮೇಲೆ ಲಕ್ಷ್ಮಿ ಆಡುತ್ತಿರುತ್ತಿದ್ದ, ಮಾವ ಬಂದು ಕರೆದುಕೊಂಡು ಹೋಗುವವರೆಗೂ ಶಾಲೆಯ ಬಳಿಯಿದ್ದ ಸಣ್ಣ ನಾಗರಕಟ್ಟೆಯ ಬಳಿ ಅಜ್ಜ ಕಾಣಿಸತೊಡಗಿದ. ಅಜ್ಜ ಅಲ್ಲೇ ಕೂತಿರುತ್ತಿದ್ದ. ಎರಡು ಜಡೆ ಕೈತುಂಬ ಸಣ್ಣ ಬಳೆ, ರೇಶಿಮೆ ಲಂಗ... ಸ್ವರ್ಗದ ವಾಹನ ಬಂದು ಲಕ್ಷ್ಮಿಯನ್ನು ಇಳಿಸಿ ಹೋದಂತೆ ಶಾಲೆಯ ಎಲ್ಲಾ ಮಕ್ಕಳು ನೋಡುತ್ತಿದ್ದರು. ಆಗ ಎರಡನೆಯತ್ತೆಯಲ್ಲಿದ್ದಳು ಲಕ್ಷ್ಮಿ. ದೊಡ್ಡಮನೆಯಿಂದ ತನ್ನ ಜೊತೆಗೇ ಶಾಲೆಗೆ ಬರುತ್ತಿದ್ದ ಹುಡುಗಿಯೊಬ್ಬಳು ಸತ್ತಳು. ಹಾಗನ್ನಬಾರದು. ದೇವರ ಹತ್ತಿರ ಹೋದಳು. ಅದೂ ಅನ್ನಲು ಹೇಗೆ ಸಾಧ್ಯ. ದೇವರ ಪಕ್ಕವೇ